ಮಾಕ್ಕಳ್ಳಿ, ಅಡಕಮಾರನಹಳ್ಳಿ, ಅರಸೀಕೆರೆ ಇತ್ಯಾದಿ ಗ್ರಾಮಗಳ ಅಂದಾಜುಗಳು ತಯಾರಾಗಿವೆ. ಆದಷ್ಟು ಬೇಗ ಅವುಗಳನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ತ್ಯಾಮಗೊಂಡಲು ಹೋಬಳಿಯಲ್ಲಿ ಹೋದ ಸಾಲನಲ್ಲೇ ಮಳಲಕುಂಟೆ, ಮಣ್ಣೆ ಇತ್ಯಾದಿ ಗ್ರಾಮಗಳ ಜನರು 33 ಸಾವಿರ ರೂಪಾಯಿಗಳನ್ನು ಬಾವಿಗಳಿಗಾಗಿ ಡಿಪಾಜಿಟ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವೀಗ ಕೇಳಿರುವ ಪ್ರಶ್ನೆ ಹೋದವರ್ಷ ನೆಲಮಂಗಲ ತಾಲ್ಲೂಕಿನಲ್ಲಿ ಎಷ್ಟು ಅರ್ಜಿಗಳು ಬಂದಿದ್ದವು ಮತ್ತು ಎಷ್ಟು ಸ್ಯಾಂಕ್ಷನ್ ಆಗಿದ್ದವು ಎಂದು. ಅದಕ್ಕೆ 9 ಅಪ್ಲಿಕೇಷನ್ ಬಂದಿದ್ದವು, 8 ಸ್ಯಾಂಕ್ಷನ್ ಆಗಿವೆ ಎಂದು ಉತ್ತರ ಕೊಟ್ಟಿದೆ. ಇನ್ನೊಂದು ಬಾಕಿ ಉಳಿದಿದೆ ಎಂದು ಹೇಳಿದ್ದೇನೆ.

Electricity (Supply from Gubbi to Kadaba and other places).

Q.—691. Sri B. HUTCHE GOWDA (Turuvekere).—

Will the Government be pleased to state :—

(*a*) whether an estimate has been proposed for supplying electricity from Gubbi to Kadaba and Kallur villages and onwards ;

(*b*) when this will be implemented?

A.—Sri H. M. CHANNABASAPPA (Minister for Industries).—

(*a*) An esimate was prepared in 1950.

(*b*) This will be considered if the revenue return proves to be adequate.

ಶ್ರೀ ಬಿ. ಹುಚ್ಚೇಗೌಡ.—ಈ ಅಂದಾಜು ಮೊಬಲಗು ಎಷ್ಟು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಲ್ಕು ಲಕ್ಷದ ಐವತ್ತುಸಾವಿರ ರೂಪಾಯಿಗಳು.

ಶ್ರೀ ಬಿ. ಹುಚ್ಚೇಗೌಡ.—ಇದರಿಂದ ಎಷ್ಟು ಪರ್ಸೆಂಟ್ ಬಡ್ಡಿ ಬಂದಹಾಗೆ ಆಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಶೇಕಡ ಐದು ಉತ್ಪತ್ತಿ ಬರುವುದಾಗಿ ಅಂದಾಜಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಇದನ್ನು ಇನ್ನೂ ಮುಂದುವರಿಸಿದರೆ ಹೆಚ್ಚು ಉತ್ಪತ್ತಿ ಬರುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಚ್ಚು ಉತ್ಪತ್ತಿ ಬರುವುದಾಗಿದ್ದರೆ ಆ ಕಾರ್ಯವನ್ನು ಸರ್ಕಾರದವರು ಅಗತ್ಯವಾಗಿ ಕೈಗೊಳ್ಳುತ್ತಾರೆಂಬ ಅಂಶ ಮಾನ್ಯ ಸದಸ್ಯರಿಗೆ ಗೊತ್ತಿದೆ.

Electricity (Supply to Chamarajanagar and Yelandur Taluks).

Q.—335. Sri B. RACHIAH (Yelandur—Scheduled Castes).—

Will the Government be pleased to state :—

(*a*) the names of villages which have assured 7·5 per cent of income and applied for the supply of electricity in Chamarajanagar and Yelandur Taluks ;

(*b*) the estimates that have already been sanctioned ;

(*c*) the estimates that are pending sanction ?

A.—Sri H. M. CHANNABASAPPA (Minister for Industries).—

(*a*) Bagali, Navalur, Ganaganur, Hulikerehundi, Kodnehundi, Sattayyanahundi, Ummathur, Madapura, Doddaravapet, Alur, Kagalavadi, Pura.

(*b*) None.

(*c*) All are pending sanction.

ಶ್ರೀ ಬಿ. ರಾಚಯ್ಯ.—ಇದು ಎಷ್ಟು ವರ್ಷಗಳಿಂದ ಮಂಜೂರಾಗದೆ ಹೀಗೇ ಸರ್ಕಾರದಲ್ಲಿ ನಿಂತು ಬಂದಿದೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಅಂದಾಜುಗಳನ್ನು ತಯಾರಿಸಲಾಗಿದೆ. ಮತ್ತೆ ಕೆಲವು ಅಂದಾಜುಗಳನ್ನು ಬದಲಾವಣೆ ಮಾಡಬೇಕಾಗಿ ಬಂತು. 6-7 ತಿಂಗಳ ಈಚೆಗೆ ಈ ಬದಲಾವಣೆಗಳನ್ನು ಆಲೋಚಿಸಲಾಯಿತು.

ಶ್ರೀ ಬಿ. ರಾಚಯ್ಯ.—ಹಾಗೆ 6-7 ತಿಂಗಳ ಕೆಳಗೆ ಆಲೋಚಿಸಬೇಕಾಗಿದ್ದರೆ, ಇವು ಸರ್ಕಾರದವರ ಮುಂದೆ ಬಂದದ್ದು ಯಾವಾಗ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನೂ ಬಂದಿಲ್ಲ. ಬಾಗಳಿ ಗ್ರಾಮದ್ದು ಅಂದಾಜು ತಯಾರಾಗಿದೆ. 28 ಸಾವಿರ ರೂಪಾಯಿಗಳ ಅಂದಾಜಾಗಿದೆ. ಇನ್ನು ನವಿಲೂರು ಗ್ರಾಮಕ್ಕೆ 12,944 ರೂಗಳಿಗೆ ಒಂದು ಅಂದಾಜು ತಯಾರಾಗಿದೆ. ಇಲ್ಲಿ ಶೇಕಡ 10 ರಿಟರ್ನ್ ಬರುತ್ತದೆ. ಉಮ್ಮತ್ತೂರು ಗ್ರಾಮದ ಅಂದಾಜು ಸಹ ತಯಾರಾಗಿದೆ. ಶೇಕಡ 9·2 ರಿಟರ್ನ್ ಬರುತ್ತದೆ. ಮಾದಾಪುರದ್ದು 13,500 ರೂಪಾಯಿಗಳಿಗೆ ಅಂದಾಜಾಗಿದೆ. ಶೇಕಡ 13 ರೂಪಾಯಿ ರಿಟರ್ನ್ ಬರುತ್ತದೆ. ಗಣಗನೂರು, ಹುಲಿಕೆರೆ, ಹುಂಡಿ, ಕೊಂಡೆತಮ್ಮನಹಳ್ಳಿ, ಇತ್ಯಾದಿ ನಾಲ್ಕೈದು ಗ್ರಾಮಗಳಿಗೆ 35,468 ರೂಪಾಯಿಗಳಿಗೆ ಅಂದಾಜಾಗಿದೆ. ಶೇಕಡ 10 ರೂಪಾಯಿ ಉತ್ಪತ್ತಿ ಬರುತ್ತದೆಯೆಂದು ಹೇಳಿದ್ದಾರೆ. ಆಲೂರು, ದೊಡ್ಡರಾಯಪೇಜೆ, ಕಾಗಲವಾಡಿ ಈ ಗ್ರಾಮಗಳಿಗೆ 97 ಸಾವಿರ ರೂಪಾಯಿಗಳಿಗೆ ಅಂದಾಜು ತಯಾರಾಗಿದೆ. ಆದರೆ ಈ ಗ್ರಾಮಸ್ಥರುಗಳು ಸ್ವಂತ ಜವಾಬ್ದಾರಿಯ ಬಗ್ಗೆ ಇನ್ನೂ ಮುಚ್ಚಳಿಕೆಗಳನ್ನು ಬರೆದು ಕೊಟ್ಟಿಲ್ಲ. ಆದುದರಿಂದ ಕೆಲಸ ನಿಂತಿದೆ. ರಸ್ತೆಯ ಕೆಲಸಗಳೂ